**ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ**
**ವಿಷಯ : ಕುಷ್ಟಗಿಯಲ್ಲಿ ಹೆಣ್ಣುಮಗಳ ಮೇಲೆ ಅತ್ಯಾಚಾರ.**

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನವ ಕುಲಕ್ಕೆ ಕಳಂಕ ತರುವ ಒಂದು ಘಟನೆ ರಾಯಚೂರು ಜಿಲ್ಲೆಯ ಕುಷ್ಟಗಿಯಲ್ಲಿ ನಡೆದಿದೆ. ಉನ್ನತ ಅಧಿಕಾರಿಗಳು ಸಾಮೂಹಿಕವಾಗಿ ಮಾನಭಂಗ ಮಾಡಿ ಹೆಣ್ಣುಮಗಳನ್ನು ಬೆಂಕಿ ಹಚ್ಚಿ ಸುಟ್ಟಿರುವುದು ಕಂಡು ಬಂದಿದೆ. ಇಲ್ಲಿಯವರೆಗೆ ಅಧಿಕಾರಿಗಳನ್ನು ಅರೆಸ್ಟ್ ಮಾಡಿಲ್ಲ, ಅದನ್ನು ಮುಚ್ಚಿಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಈ ಬಗ್ಗೆ ನಾವು ನಿಲುವಳಿ ಸೂಚನೆ ಕಳಿಸಿಕೊಟ್ಟಿದ್ದೇವೆ. ಇಡೀ ಮಾನವ ಕುಲಕ್ಕೆ ಕಳಂಕ ತರುವ ಹೇಯಕೃತ್ಯವನ್ನು ಕುಷ್ಟಗಿಯಲ್ಲಿ ಮಾಡಿದ್ದಾರೆ. ಈ ಬಗ್ಗೆ ಪ್ರಶ್ನೋತ್ತರ ಕಾಲವನ್ನು ಮುಂಚೆ ರದ್ದುಮಾಡಿ ಚರ್ಚೆಯಾಗಬೇಕು. ಸರ್ಕಾರ ಇದರ ಬಗ್ಗೆ ಹೇಳಿಕೆ ಕೊಡಬೇಕು. ಅದಕ್ಕೆ ಮುಂಚೆ ಬೇರೆ ಯಾವುದೇ ಕಾರ್ಯಕಲಾಪ ನಡೆಯುವಂಥ ಅಗತ್ಯವಿಲ್ಲ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ : ಕುಷ್ಟಗಿಯಲ್ಲಿ ಇಂತಹ ಬರ್ಬರ ಕೃತ್ಯ ಏನು ನಡೆದಿದೆ ಇದು ಸರ್ಕಾರದ ಮುಖದ ಮೇಲೆ ಇಟ್ಟಿರುವ ದೊಡ್ಡ ಕಪ್ಪುಚುಕ್ಕಿ. ದಲಿತರ ಹೆಸರಿನ ಮೇಲೆ ಅಧಿಕಾರಕ್ಕೆ ಬಂದಿರುವ ಈ ಸರ್ಕಾರ ಒಬ್ಬ ಹೆಣ್ಣುಮಗಳನ್ನು ಹಾಡು ಹಗಲಿನಲ್ಲಿ...

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಅಧ್ಯಕ್ಷರೇ, ಈ ದಿವಸ ಪ್ರಶ್ನೋತ್ತರ ಕಾಲ ಬೇಡ. ಪ್ರಶ್ನೋತ್ತರ ಕಾಲವನ್ನು ರದ್ದುಮಾಡಿ ಈ ಪ್ರಕರಣ ಮಾನವ ಕುಲಕ್ಕೆ ಅಪಮಾನ, ಹೆಣ್ಣುಕುಲಕ್ಕೇ ಅಪಮಾನ. ಪರಿಶಿಷ್ಟವರ್ಗದ ಹೆಣ್ಣುಮಗಳ ಮೇಲೆ ನಡೆದಿರತಕ್ಕ ಅತ್ಯಾಚಾರ. ಇಡೀ ಸರ್ಕಾರ ರಾಜಿನಾಮೆ ಕೊಡಬೇಕಾಗಿದೆ. ಇದರಲ್ಲಿ ಯಾವ ಅಧಿಕಾರಿಗಳಿದ್ದಾರೆ ಅವರನ್ನು ವಜಾಮಾಡಬೇಕು.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ. ನಾನು ತಮ್ಮ ಪ್ರಸ್ತಾಪನೆಗೆ ಸಮಸ್ಯೆಯ ಗಂಭೀರತೆಯನ್ನು ಅರಿತು ಕಾಲಾವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಇಂತಹ ಹೇಯಕೃತ್ಯ ಇತ್ತೀಚೆಗೆ ನಡೆದೇ ಇಲ್ಲ. ಸರ್ಕಾರ ರಾಜೀನಾಮೆ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರು ತಮ್ಮ ಅಧಿಕಾರ ಚಲಾಯಿಸಿ ಪ್ರಶ್ನೋತ್ತರ ಕಾಲ ಮುಂದೂಡಿರುವ ಸಂದರ್ಭ ಇದೆ. ಹಿಂದೆ ಅನೇಕ ಸಾರಿ ಇದು ನಡೆದಿದೆ. ದಯಮಾಡಿ ತಾವು ಪ್ರಶ್ನೋತ್ತರ ಕಾಲ ರದ್ದುಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ

ಅತ್ಯಂತ ಕಳಕಳಿಯಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಕುಳಿತುಕೊಳ್ಳಿ, ನಾನು ಅವಕಾಶ ಮಾಡಿಕೊಡುತ್ತೇನೆ. ನಾನು ಒಮ್ಮೆ ಹೇಳಿದ ನಂತರ ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರಿ ಎಸ್. ಅನಂತಕೃಷ್ಣ : ಕ್ವೆಶ್ಚನ್ ಅವರಲ್ಲಿ ಏನು ಇಂಪಾರ್ಟೆಂಟ್ ಇದೆ? ಇದಕ್ಕಿಂತ ದೇಯವಾದದ್ದು ಯಾವುದು ಇಲ್ಲ, ನಿಜವಾಗಿಯೂ ಇದು ಚರ್ಚೆಯಾಗಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಸನ್ಮಾನ್ಯ ಅಧಕ್ಷರೇ, ನಾನೂ ಬಿ.ಜೆ.ಪಿ.ಯ ಈಶ್ವರಯ್ಯನವರು, ಯಡಿಯೂರಪ್ಪನವರು, ವಾಟಾಳ್ ನಾಗರಾಜರವರು, ಹಂಪನಗೌಡರು ತಮ್ಮನ್ನು ಭೇಟಿ ಮಾಡಿ ಒಂದು ನಿಲುವಳಿ ಸೂಚನೆ ಕೊಟ್ಟಿರುವ ಉದ್ದೇಶವಾದರೂ ಈ ಸದನದ ಕಾರ್ಯಕಲಾಪಗಳಿಗೆ ಅಡ್ಡಿ ಬರಬೇಕು ಅಥವಾ ಈ ಸದನದ ಪ್ರಶ್ನೋತ್ತರದ ವೇಳೆಯನ್ನು ನಿಲ್ಲಿಸಬೇಕು ಎನ್ನತಕ್ಕ ಉದ್ದೇಶದಿಂದ ಅಲ್ಲ. ನಾವಾದರೂ ಎನನ್ನು ಹೇಳುತ್ತಿದ್ದೇವೆ ಅಂದರೆ, ಈ ಸದನದಲ್ಲಿ ಮಹತ್ತರವಾಗಿರತಕ್ಕಂತಹ ಇಡೀ ಕರ್ನಾಟಕದ ಸಮಗ್ರ ನಾಲ್ಕೂವರೆ ಕೋಟಿ ಜನತೆಗೆ ಅವಮಾನವಾಗತಕ್ಕಂಥ ಮತ್ತು ಯಾವ ಹೆಸರಿನ ಮೇಲೆ ಅಧಿಕಾರಕ್ಕೆ ಬಂದಿರತಕ್ಕಂತಹ ಕಾಂಗ್ರೆಸ್ ಸರ್ಕಾರದ ಮುಖದ ಮೇಲೆ ಕಪ್ಪುಚುಕ್ಕೆಯನ್ನು ಇಡತಕ್ಕಂತಹ ಒಂದು ಪ್ರಕರಣ ನಡೆದಿದೆ. ಇದಕ್ಕಿಂತ ಮಹತ್ತರವಾದಂತಹ ವಿಚಾರ ಇನ್ನು ಯಾವುದು ಇಲ್ಲ ಎಂದು ಹೇಳುತ್ತೇನೆ. ತಾವು ಶೂನ್ಯ ವೇಳೆಯಲ್ಲಿ ಇದಕ್ಕೆ ಅವಕಾಶವನ್ನು ಕೊಡತಕ್ಕಂಥದ್ದು ಬೇರೆ ವಿಚಾರವಾಗುತ್ತದೆ. ಯಾವುದೋ ಒಂದು ಸಣ್ಣ ವಿಚಾರವಾದರೆ ಶೂನ್ಯವೇಳೆಯಲ್ಲಿ ನಾವು ಕೇಳಬಹುದಾಗಿತ್ತು. ಆದರೆ ಇದು ಬಹಳ ಮಹತ್ತರವಾಗಿರತಕ್ಕಂಥದ್ದು, ಗಂಭೀರವಾಗಿರತಕ್ಕಂಥದ್ದು. ಸರ್ಕಾರದ ಆಡಳಿತದ ಸಂಪೂರ್ಣ ಯಂತ್ರ ಈ ಕೃತ್ಯದಲ್ಲಿ ಶಾಮೀಲಾಗಿರತಕ್ಕಂಥ ಪ್ರಕರಣವಾಗಿರುವುದರಿಂದಾಗಿ ಹೇಳುತ್ತಿದ್ದೇವೆ. ತಾವು ಅಧಕ್ಷರು, ತಾವು ಏನು ಹೇಳಿದರೂ ನಾವು ಕೇಳುತ್ತೇವೆ. ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಆದರೆ ಈ ವಿಷಯದ ಗಂಭೀರತೆಯನ್ನು ಅರಿತು ಇಂತಹ ಪ್ರಕರಣಗಳು ಈ ರಾಜ್ಯದಲ್ಲಿ ನಡೆದಂತಹ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಗಂಟೆಗಟ್ಟಲೆ ಕಾಲ ಅಲ್ಲ, ದಿನಗಟ್ಟಲೆ ಚರ್ಚೆ ನಡೆದಿರತಕ್ಕಂತಹ ಅನೇಕ ಉದಾಹರಣೆಗಳು ಇವೆ. ಈ ವಿಚಾರದಲ್ಲಿ ನಾವು ಹೇಳತಕ್ಕದ್ದು ಅನೇಕ ವಿಚಾರಗಳು ಇವೆ. ಈ ಘಟನೆ ನಡೆದಿರುವುದು ಫೆಬ್ರುವರಿ 10ನೇ ತಾರೀಖು. ಇವತ್ತು ಆಗಲೇ ಮಾರ್ಚ್ 5 ತಾರೀಖು. ದೊಡ್ಡ ದೊಡ್ಡ ಮಾತುಗಳನ್ನು ಹೇಳತಕ್ಕಂಥ ಈ ಸರ್ಕಾರ ಮಾನ್ಯ ಮುಖ್ಯಮಂತ್ರಿಗಳು ಇದುವರೆಗೂ ಸಹಿತ ಇದರ ಬಗ್ಗೆ ಚಕಾರವನ್ನು ಎತ್ತಿಲ್ಲ. ನನಗೆ ಗೊತ್ತಿರುವಂತಹ ವಿಚಾರದ ಪ್ರಕಾರವಾಗಿ ಅಲ್ಲಿರತಕ್ಕಂಥ ಎಸ್.ಪಿ.ಯವರು ಸರ್ಕಲ್ ಇನ್ಸ್‌ಪೆಕ್ಟರಿಗೆ ಒಂದು ಟೆಲಿಗ್ರಾಂ ಅನ್ನು ಕಳುಹಿಸಿದ್ದಾರೆ. ಆ ಟೆಲಿಗ್ರಾಂ ಅಲ್ಲಿ ವೈರ್‌ಲೆಸ್ ಕಳುಹಿಸುತ್ತಾರೆ. ಆದರಲ್ಲಿ ಯಾವ ಬರ್ಭರ ಕೃತ್ಯಕ್ಕೆ ಒಳಗಾಗಿರತಕ್ಕಂಥ ಹರಿಜನ ಹೆಣ್ಣುಮಗಳು ಇದ್ದಾಳೆ, ಅವಳ ತಾಯಿಯನ್ನು ನೀವು ಭೇಟಿ ಮಾಡಿ ಎಂದು ಸಾರ್ವಜನಿಕರನ್ನು ಭೇಟಿ ಮಾಡಿ ಎಂದು ಹೇಳುವುದಿಲ್ಲ. ಇಡೀ ಕುಷ್ಣಗಿ ನಗರದಲ್ಲಿ ಇವತ್ತು ಪ್ರಕ್ಷುಬ್ಧವಾದ ವಾತಾವರಣ ಆಗಿದೆ.

ಅಧ್ಯಕ್ಷರು : ಮಾನ್ಯ ಸಿಂಧ್ಯರವರೇ, ನಾನು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಯಾವಾಗ ಕೊಡುತ್ತೀರಿ?

ಅಧ್ಯಕ್ಷರು : ಈ ಪ್ರಶ್ನೋತ್ತರ ಕಾಲ ಮುಗಿದ ಮೇಲೆ ಕೊಡುತ್ತೇನೆ.
(ಗೊಂದಲ)

ಅಧ್ಯಕ್ಷರು : ನಾನು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ಮಾನ್ಯ ವಾಟಾಳರೇ ದಯವಿಟ್ಟು ಕುಳಿತುಕೊಳ್ಳಿ.
(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ. ಸರ್ಕಾರ ಇದರ ಬಗ್ಗೆ ಸ್ಟೇಟ್‌ಮೆಂಟನ್ನು ಮಾಡಲಿ. ಕ್ವೆಶ್ಚನ್ ಅವರನ್ನು ತೆಗೆದುಕೊಂಡು ಏನು ಮಾಡೋಣ.
(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರ ಬೇಡಿ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳಿ.
(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಪ್ರಮುಖವಾದ ವಿಚಾರವನ್ನು ನಾನು ಹೇಳುತ್ತಿದ್ದೇನೆ.
(ಗೊಂದಲ)

MR. SPEAKER: Nothing will go on record. ತಾವು ಏನಾದರೂ ಹೇಳುವುದಿದ್ದರೆ ಅದನ್ನು ಶಾಂತರೀತಿಯಿಂದ ಹೇಳಿದರೆ ಅದಕ್ಕೆ ನಾನು ಪರ್ಮಿಷನ್ನು ಕೊಡುತ್ತೇನೆ.

ಶ್ರೀ ಪಿ. ಜಿ. ಆರ್ ಸಿಂಧ್ಯ : ತಾವು ಪ್ರಶ್ನೋತ್ತರ ಮುಗಿದ ಮೇಲೆ ಈ ವಿಷಯದ ಪ್ರಸ್ತಾಪಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ.
(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು. ಕ್ವೆಶ್ಚನ್ ಅವರನ್ನು ಸಸ್ಪೆಂಡ್ ಮಾಡಿ. ಇದಕ್ಕಿಂತ ಪ್ರಮುಖವಾದ ಸಂಗತಿ ಬೇರೊಂದು ಇಲ್ಲ. ಸರ್ಕಾರ ಈ ಘಟನೆಯನ್ನು ಮುಚ್ಚಿ ಹಾಕುವ ಪ್ರಯತ್ನವನ್ನು ಮಾಡಿದೆ. ಇದರಲ್ಲಿ ಪೋಲೀಸ್ ಅಧಿಕಾರಿಗಳು ಶಾಮೀಲಾಗಿದ್ದಾರೆ. ಪರಿಶಿಷ್ಟ ಜನರಿಗೆ ರಕ್ಷಣೆಯನ್ನು ಕೊಡುವುದಕ್ಕಾಗಿಲ್ಲ. ಮಹಿಳೆಯರ ಮಾನಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕು ಎನ್ನುವ ಕಳಕಳಿ ನಿಮ್ಮ ಸರ್ಕಾರಕ್ಕೆ ಇದೆಯೆ? ಈ ಘಟನೆ ನಡೆದು 20 ದಿವಸ ಆಯಿತು. ಸರ್ಕಾರ ಇದರ ಬಗ್ಗೆ ಸ್ಟೇಟ್‌ಮೆಂಟನ್ನು ಮಾಡಿದ್ದರೆ ಪರವಾಗಿರಲಿಲ್ಲ. ಇದನ್ನು ಮುಚ್ಚಿ ಹಾಕುವಂಥ ಪ್ರಯತ್ನವನ್ನು ಮಾಡುತ್ತಿದ್ದೀರಿ. ಮಹಿಳೆಯರ ಮಾನಭಂಗವಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಹಿಳೆಯರ ಮಾನಭಂಗ. ಸರ್ಕಾರ ಇದೆಯೇ ಇಲ್ಲವೇ? ಆದ್ದರಿಂದ ನಾವು ಪ್ರಶ್ನೋತ್ತರ ಕಾಲವನ್ನು ಬಹಿಷ್ಕರಿಸುತ್ತಿದ್ದೇವೆ.

(ಗೊಂದಲ)

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ....

(ಗೊಂದಲ)

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಏನು ಹೇಳುತ್ತಾರೊ ಕೇಳೋಣ.

(ಗೊಂದಲ)

ಶ್ರೀ ಧರ್ಮಸಿಂಗ್ : ನಾನು ಕೂಡ ಈ ದಿನ ಪತ್ರಿಕೆಯಲ್ಲಿ ಓದಿ ಡಿ.ಜಿ.ಪಿ. ಅವರಿಗೆ ಸಂಪರ್ಕ ಮಾಡಿ ಮಾತನಾಡಿದ್ದೇನೆ. ಮತ್ತು ಪೋಲೀಸ್ ಅಧಿಕಾರಿಗಳಾದ ನಾಗರಾಜ್ ಜೊತೆಯಲ್ಲಿ ಮಾತನಾಡಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನಭಂಗವನ್ನು ಮುಚ್ಚಿಟ್ಟಿದ್ದಾರೆ. ಅತ್ಯಾಚಾರವನ್ನು ಮುಚ್ಚಿಟ್ಟಿದ್ದಾರೆ.

MR. SPEAKER: Nothing will go on record.

(ಗೊಂದಲ)

ಶ್ರೀ ಧರ್ಮಸಿಂಗ್ : ಇದರ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಯಾರ ಮಾನ ಮರ್ಯಾದೆಯ ಬಗ್ಗೆ ಕಳಕಳಿ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಒಬ್ಬ ಪರಿಶಿಷ್ಟ ಜಾತಿ ಹೆಣ್ಣುಮಗಳ ಮೇಲೆ ಅತ್ಯಾಚಾರವಾಗಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಪರಿಶಿಷ್ಟ ವರ್ಗ ಎಂದಲ್ಲ, ಹೆಣ್ಣುಮಕ್ಕಳ ಕುಲಕ್ಕೆ ಅವರ ಮರ್ಯಾದೆಯನ್ನು ಹಾಳು ಮಾಡಿದಂತಹ ಜನ ನೀವು. ಮಾನವ ಕುಲವೇ ತಲೆತಗ್ಗಿಸುವಂತಹ

ಘಟನೆ ನಡೆದಿದೆ. ಈ ಅಧಿಕಾರಿ ಇಂತಹ ಮೂರ್ನಾಲ್ಕು ಕೃತ್ಯ ನಡೆಸಿದ್ದಾನೆ. ಅದನ್ನು ಮುಚ್ಚಿ ಹಾಕಲಾಗಿದೆ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ.

(ಗೊಂದಲ)

ಶ್ರೀ ಧರ್ಮಸಿಂಗ್ : ವಿರೋಧ ಪಕ್ಷದ ಉಪನಾಯಕರು, ಮಾನ್ಯ ಯಡಿಯೂರಪ್ಪನವರು,ನಾಗರಾಜ್ ಅವರು ಮತ್ತು ಇತರ ಸದಸ್ಯರು...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ದಯಮಾಡಿ ಕ್ವೆಶ್ಚನ್ ಅವರ್ ಅನ್ನು ಸಸ್ಪೆಂಡ್ ಮಾಡಿ. (ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಸಮಯದ ನಂತರ ನಾನು ಪ್ರಸ್ತಾಪಕ್ಕೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಮಗೆ ಇದರ ಬಗ್ಗೆ ಕಳಕಳಿ ಇದೆ, ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು. ಮಾನ ಮರ್ಯಾದೆ ಇದ್ದರೆ, ಜನರ ಬಗ್ಗೆ ನಿಮಗೆ ಕಳಕಳಿ ಇದ್ದರೆ ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕು. ಜನರು ನಿಮ್ಮನ್ನು ಬಿಡುವುದಿಲ್ಲ....

(ಗೊಂದಲ)

ಶ್ರೀ ಧರ್ಮಸಿಂಗ್ : ಪ್ರಶ್ನೋತ್ತರ ಕಾಲ ಆದ ನಂತರ ಪ್ರಸ್ತಾಪ ಮಾಡಬಹುದು.

ಅಧ್ಯಕ್ಷರು : ರೆಕಾರ್ಡ್ ಮಾಡಬೇಡಿ..

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಪ್ರಶ್ನೋತ್ತರ ಯಾರಿಗೆ ಬೇಕಾಗಿದೆ.

(ಪಕ್ಷೇತರ ಸದಸ್ಯರು ಸಭಾ ತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಈ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸದನದ ನಿಯಮಾವಳಿ ಬಿಟ್ಟು ಪ್ರಶ್ನೋತ್ತರ ಕಾಲದಲ್ಲಿ ಸಂಬಂಧಪಟ್ಟ...

(ಗೊಂದಲ)

ಅಧ್ಯಕ್ಷರು : ಈಶ್ವರಪ್ಪನವರೆ ತಾವು ಅಲ್ಲಿ ಕುಳಿತು ಮಾತನಾಡಿ..

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗಂಭೀರವಾದಂತಹ ವಿಷಯ ಇದೆ. ನಾನೂ ಕೂಡ ಇದರ ಬಗ್ಗೆ ತಮಗೆ ಭೇಟಿ ಆಗಿ ಪ್ರಸ್ತಾಪ ಮಾಡಿದ್ದೇನೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ನಿಯಮದ ಪ್ರಕಾರ ಅತ್ಯಾಚಾರ ಆಗಿದೆಯೇ ಹೇಳಿ. ನೀತಿ ನಿಯಮದ ಪ್ರಕಾರ, ಕಾನೂನು ಪ್ರಕಾರ ಅತ್ಯಾಚಾರ ಆಗಿದೆಯೇ?

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ : ನೀತಿ ನಿಯಮಾವಳಿ ಪ್ರಕಾರ ನಮಗೂ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ನೀತಿ ನಿಯಮ ಮಾಡುವುದಕ್ಕೆ ಇವರಿಗೆ ಏನೂ ಹಕ್ಕು ಇಲ್ಲ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಉಪನಾಯಕರೆ, ನಿಮಗೆ ಅವಕಾಶ ಇದೆ ಇಲ್ಲವೆಂದು ನಾನು ಹೇಳುವುದಿಲ್ಲ. ಅಧ್ಯಕರೆ, ನಾನು ಎದ್ದು ನಿಂತಿದ್ದೇನೆ, ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕು. ವಿರೋಧಿ ಪಕ್ಷದ ನಾಯಕರು ಈಗ ಹೇಳಿದ್ದಾರೆ. ಈ ಸದನಕ್ಕೆ ಕೆಲವೊಂದು ನಿಯಮಾವಳಿ ಇದೆ. ಸನ್ಮಾನ್ಯ ಸದಸ್ಯರಾದ ಪುಟ್ಟಸ್ವಾಮಿ ಗೌಡರ ಪ್ರಶ್ನೆ ಇದೆ. ಪ್ರಶ್ನೆಗಳು ಇದ್ದಾಗ ಇದು ಗಂಭೀರವಾದ ವಿಷಯ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ನಾವೂ ಸಹ ಈ ವಿಷಯದಲ್ಲಿ ತಮ್ಮ ಗಮನವನ್ನು ಸೆಳೆದಿದ್ದೇವೆ. ಏನು ಒಂದು ವಿಷಯ ಇದೆ, ಆ ವಿಷಯವನ್ನು ಬಿಟ್ಟು ಇವರು ಪ್ರಶ್ನೆ ಪತ್ರಿಕೆ ಹರಿದು ಹಾಕಿ ನಾವೇ ಬಹಳ ಈ ಸದನಕ್ಕೆ ದೊಡ್ಡವರು, ಗಂಭೀರವಾದ ವಿಷಯವನ್ನು ಎತ್ತುತ್ತಿದ್ದೇವೆ ಎನ್ನತಕ್ಕ ಅಭಿಪ್ರಾಯವನ್ನು ಏನಾದರೂ ಈ ಸದನದಲ್ಲಿ ಎತ್ತಿ ಹಿಡಿದರೆ ಅದು ಬಹಳ ಗಂಭೀರವಾದ ವಿಷಯವಾಗುತ್ತದೆ, ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಪ್ರಶ್ನೆಯನ್ನು ಹರಿದು ಹಾಕಿದರು. ಇದು ಗಂಭೀರವಾದ ವಿಷಯ. ಇದು ಸದಸ್ಯರ ಹಕ್ಕನ್ನು ಮೊಟಕು ಮಾಡತಕ್ಕ ಕಾರ್ಯಕ್ಕೆ ಹೋಗುತ್ತದೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ : ಆದರೂ ಈ ವಿಷಯದಲ್ಲಿ ವಿರೋಧಪಕ್ಷದವರು ಇರಲಿ, ರೂಲಿಂಗ್ ಪಾರ್ಟಿಯವರು ಇರಲಿ. ಎಲ್ಲರೂ ಕೂಡ ಈ ಸದನದಲ್ಲಿ ಸಹಕಾರ ಮಾಡಬೇಕಾಗುತ್ತದೆ. ತಾವು ಹೇಳಿದ ಮೇಲೆಯೂ ಕೂಡ ಇವರದ್ದೆ ಆದ ಧಾಟಿಯಿಂದ ಮಾಡುತ್ತಿರುತ್ತಾರೆ. ನಾವೂ ಸದಸ್ಯರಾಗಿದ್ದೇವೆ. ಗಂಭೀರವಾದ ಪ್ರಶ್ನೇ ಇದೆ, ತಾವು ಕೂಡ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ.ತಾವು ಹೇಳಿದ ಮೇಲಾದರೂ ಕೂಡ ಈ ಸದನದಲ್ಲಿ ಗಂಭೀರತೆಯನ್ನು ಕಾಪಾಡಿಕೊಳ್ಳತಕ್ಕ ಪರಿಸ್ಥಿತಿಗೆ ನಾವು ಬರಲೇಬೇಕಾಗುತ್ತದೆ. ದಯಮಾಡಿ ತಾವು ರೂಲಿಂಗ್ ಎಂದು ಕೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ವಿಷಯದ ಗಂಭೀರತೆಯನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಮತ್ತೆ ಸರ್ಕಾರ ಮಾಡಿರತಕ್ಕ ತಪ್ಪು , ಸರ್ಕಾರ ಎಂದರೆ ಸರ್ಕಾರದ ಅಧಿಕಾರಿಗಳು ಮಾಡಿರತಕ್ಕ ತಪ್ಪಿನ ವಿಚಾರವನ್ನು ಬಯಲಿಗೆ ಎಳೆಯಬೇಕು. ಇದರ ಬಗ್ಗೆ ಸವಿಸ್ತಾರವಾಗಿ ಈ ಸದನದಲ್ಲಿ ಚರ್ಚೆ ಆಗಬೇಕು. ಚರ್ಚೆಗಳ ಬದಲಾಗಿ ಕೂಗಾಟ, ಅರಚಾಟಗಳಿಂದ ಏನೂ ಉಪಯೋಗ ಆಗುವುದಿಲ್ಲ ಎನ್ನತಕ್ಕ ಒಂದು ವಿಚಾರದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರತಕ್ಕವನು ನಾನು. ನಾನಾದರೂ ತಮ್ಮಲ್ಲಿ ಮನವಿ ಮಾಡುತ್ತೇನೆ..

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಹಾಕುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಈಗ ಗಂಟಲುಗಳಿಗೇ ಬಹಳ ದೊಡ್ಡ ಮಾನ್ಯತೆ ಸಿಗುತ್ತದೆ ಎಂದರೆ ನಾವೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾನಾದರೂ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಈಗ ನಮ್ಮ ಗೌರವಾನ್ವಿತ ಸದಸ್ಯರುಗಳು ಯಾರು ಇದ್ದಾರೆ, ಅವರಿಗೆ ಒಂದು ಹಕ್ಕು ಇದೆ, ಪ್ರಶ್ನೆಗಳಿಗೆ ಉತ್ತರವನ್ನು ತೆಗೆದುಕೊಳ್ಳತಕ್ಕದ್ದು. ಈ ಒಂದು ಹಕ್ಕಿಗೆ ಧಕ್ಕೆ ಬರಬಾರದು ಎಂದು ನಮ್ಮೆಲ್ಲರಿಗೂ ಸಹ ಇದೆ. ಆದರೆ ಪರಿಸ್ಥಿತಿಯ ಗಂಭೀರತೆ ತಮಗೆ ಅರ್ಥ ಆಗಿದೆ. ಏನಾಗಿದೆಯೆಂದು ನಾವು ಖುದ್ದಾಗಿ ಭೇಟಿ ಆಗಿ ತಮಗೆ ತಿಳಿಸಿದ್ದೇವೆ. ಈ ಸದನದಲ್ಲಿ ಬೇಕಾದಷ್ಟು ಉದಾಹರಣೆಗಳು ಇವೆ. ಹಿಂದೆ ಇಂತಹ ವಿಚಾರ ಭಂದಂತಹ ಸಂದರ್ಭದಲ್ಲಿ ಮಲ್ಲಾರಿಗೌಡರು ಮುಖ್ಯ ಸಚೇತರಾಗಿದ್ದ ಸಂದರ್ಭದಲ್ಲಿ ಪ್ರಶ್ನೋತ್ತರವನ್ನು ರದ್ದು ಮಾಡಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಿರತಕ್ಕ ಅನೇಕ ಉದಾಹರಣೆಗಳು ಇವೆ. ಆದರೂ ಸಹ ತಮ್ಮ ಸ್ಥಾನಕ್ಕೆ ನಾವು ಗೌರವ ಕೊಡಬೇಕು ಎನ್ನುವ ಒಂದೇ ಒಂದು ಕಾರಣದಿಂದ ಇವತ್ತು ಮಾನ್ಯ ಯಡಿಯೂರಪ್ಪನವರು ಅಥವಾ ವಾಟಾಳ್ ನಾಗರಾಜ್ ಅವರು ಏನು ಒಂದು ಪ್ರತಿಭಟನೆಯನ್ನು ಮಾಡಿದ್ದಾರೆ ಅದಕ್ಕೆ ಸಂಪೂರ್ಣವಾದ ಸಹಾನುಭೂತಿ ಇದೆ. ನಾವು ಹೊರಗಡೆ ಹೋಗಬೇಕು. ಆದರೆ ಗೌರವಾನ್ವಿತ ಸದಸ್ಯರ ಹಕ್ಕಿಗೆ ಚ್ಯುತಿ ಬರಬಾರದು ಎನ್ನುವ ಒಂದೇ ಒಂದು ಕಾರಣದಿಂದ, ಈ ಒಂದು ಸಂಸತ್ತಿನ ವ್ಯವಹಾರಗಳಲ್ಲಿ ಸತ್ಸಂಪ್ರದಾಯವನ್ನು ಹಾಕಬೇಕು ಎನ್ನುವ ಇಚ್ಛೆ ಇರುವುದರಿಂದ ನಮ್ಮ ಮನಸ್ಸಿನಲ್ಲಿ ಎಷ್ಟೇ ದುಃಖವಿದ್ದರೂ ಸಹ ತಾವು ನಮ್ಮ ನಿಲುವಳಿ ಸೂಚನೆಗೆ ಪ್ರಶ್ನೋತ್ತರದ ನಂತರದ ಅವಕಾಶವನ್ನು ಕೊಡುತ್ತೇನೆಂದು ಹೇಳಿರುವುದರಿಂದ ಅವರಲ್ಲಿ ನಂಬಿಕೆಯನ್ನು ಇಟ್ಟು ಅದುವರೆಗೆ ಸಹ ತಮಗೆ ಸಹಕಾರ ಕೊಡುತ್ತೇವೆ.

<u>ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.</u>

ವಿಷಯ: ಬಿಡದಿ ಹತ್ತಿರ ಜಪಾನ್ ಟೌನ್‌ಶಿಪ್ ಕೈಗಾರಿಕಾ ನಗರ

Q: 1070

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?